**ದಿನಾಂಕ 13.06.2013 ರಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ 231, 2ನೇ ಮಹಡಿ, ವಿಧಾನ ಸೌಧ, ಬೆಂಗಳೂರಿನಲ್ಲಿ ನಡೆದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರಿನ 16ನೇ ವಿಶೇಷ ಆಡಳಿತ ಮಂಡಳಿ ಸಭೆಯ ಸಭಾ ನಡುವಳಿಗಳು.**

**ಸಭೆಯಲ್ಲಿ ಹಾಜರಿದ್ದ ಸದಸ್ಯರು**

| | | |
|---|---|---|
| 1. ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್<br>ವೈದ್ಯಕೀಯ ಶಿಕ್ಷಣ ಸಚಿವರು,<br>ಕರ್ನಾಟಕ ಸರ್ಕಾರ, ಬೆಂಗಳೂರು. | – | ಅಧ್ಯಕ್ಷರು |
| 2. ಶ್ರೀ ಕೆ.ಹೆಚ್. ಗೋವಿಂದರಾಜ್<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈಶಿ),<br>ಬೆಂಗಳೂರು. | – | ಉಪಾಧ್ಯಕ್ಷರು |
| 3. ಶ್ರೀಮತಿ ಎಸ್. ಮಂಜುಳ ಗೀತಾ,<br>ಉಪ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, ಬೆಂಗಳೂರು | – | ಸದಸ್ಯರು |
| 4. ಡಾ. .ಜಿ.ಎಸ್. ವೆಂಕಟೇಶ್<br>ನಿರ್ದೇಶಕರು ವೈದ್ಯಕೀಯ ಶಿಕ್ಷಣ, ಬೆಂಗಳೂರು. | – | ಸದಸ್ಯರು. |
| 5. ಡಾ. ಶ್ರೀನಿವಾಸ್‌ಮೂರ್ತಿ,<br>ವೈದ್ಯಕೀಯ ಅಧೀಕ್ಷಕರು,. ರಿಮ್ಸ್ ಭೋಧಕ ಆಸ್ಪತ್ರೆ, ರಾಯಚ್ಘೂರು. | – | ಸದಸ್ಯರು |
| 6. ಶ್ರೀ ನಾಗೇಶ್,<br>ಮುಖ್ಯ ಆಡಳಿತಾಧಿಕಾರಿಗಳು, ರಿಮ್ಸ್, ರಾಯಚೂರು | – | ವಿಶೇಷ ಆಹ್ವಾನಿತರು |
| 7. ಶ್ರೀ ಸೈಯದ್ ಜೀಯಾವುದ್ದೀನ್,<br>ಆರ್ಥಿಕ ಸಲಹೆಗಾರರು, ರಿಮ್ಸ್, ರಾಯಚೂರು | – | ವಿಶೇಷ ಆಹ್ವಾನಿತರು |
| 8. ಡಾ. ಶಂಕರ್ ಮಲ್ಲಾರಿ ಮಲಪುರೆ,<br>ವಿಶೇಷಾಧಿಕಾರಿಗಳು,<br>ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು | – | ವಿಶೇಷ ಆಹ್ವಾನಿತರು |
| 9. ಡಾ. ಬಸವರಾಜ್ ಪೀರಾಪುರ್<br>ನಿರ್ದೇಶಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ<br>ರಾಯಚೂರು. | – | ಸದಸ್ಯ ಕಾರ್ಯದರ್ಶಿ |

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆಡಳಿತ ಮಂಡಳಿ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್, ಮಾನ್ಯ ವೈದ್ಯಕೀಯ ಶಿಕ್ಷಣ ಇಲಾಖೆ, ಇವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

**ವಿಶೇಷ ಆಡಳಿತ ಮಂಡಳಿ ಸಭೆಯ ಅಧ್ಯಕ್ಷರ ಸಮಕ್ಷಮದಲ್ಲಿ ತೆಗೆದುಕೊಂಡ ನಿರ್ಣಯಗಳು ಈ ಕೆಳಗಿನಂತಿವೆ.**

| | |
|---|---|
| ವಿಷಯ ಸೂಚಿ – ಸಂಖ್ಯೆ. 1 | ವೈದ್ಯಕೀಯ ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ಸ್ವಾಯತ್ತ ಸಂಸ್ಥೆಗಳು, ಮೆಡಿಕಲ್ ಕಾಲೇಜು ಹಾಗೂ ಆಸ್ಪತ್ರೆಗಳ ಬಗ್ಗೆ ಮೂಲಭೂತ ಭೌತಿಕ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಹಾಗೂ ಶೈಕ್ಷಣಿಕ / ಸೇವಾ ಮಟ್ಟವನ್ನು ಉತ್ತಮಗೊಳಿಸಲು ರಚಿಸಿ Comprensive Plan ಮಂಡಿಸುವುದು. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ 100 ವೈದ್ಯಕೀಯ ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಕಲ್ಪಸಿರುವ ಕಟ್ಟಡ, ಸಿಬ್ಬಂದಿ, ವಿದ್ಯಾರ್ಥಿಗಳಿಗೆ ಕಲ್ಪಿಸಲಾಗಿರುವ ಪ್ರತ್ಯೇಕ ವಸತಿ ಗೃಹಗಳು, ನೂತನ 520 ಹಾಸಿಗೆಯುಳ್ಳ ಬೋಧಕ ಆಸ್ಪತ್ರೆಯ ಕಾಮಗಾರಿ ಹಾಗೂ ಇನ್ನಿತರ ಮೂಲಭೂತ ಭೌತಿಕ ಸೌಲಭ್ಯಗಳ ಲಭ್ಯವಿರುವ ಬಗ್ಗೆ, ಕೂಲಂಕುಷವಾಗಿ ಪರಿಶೀಲಿಸಿದರು.

| | |
|---|---|
| ವಿಷಯ ಸೂಚಿಸ ಸಂಖ್ಯೆ – 2 | ಆಯವ್ಯಯಕ್ಕೆ ಅನುದಾನದ ಪರಿಷ್ಕೃತ ಬೇಡಿಕೆಯ ಪ್ರಸ್ತಾವನೆ ಸಲ್ಲಿಸುವ ಕುರಿತಂತೆ. |

ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ ಅವಶ್ಯವಿರುವ ವಿವಿಧ 3ನೇ ಹಂತದ ಕಟ್ಟಡ ಕಾಮಗಾರಿಗಳಾದ ನಿರ್ದೇಶಕರ ವಸತಿ ನಿಲಯ, ಮುಖ್ಯ ಆಡಳಿತಾಧಿಕಾರಿಗಳು, ಅರ್ಥಿಕ ಸಲಹೆಗಾರರು, ವೈದ್ಯಕೀಯ ಅದೀಕ್ಷಕರು, ಪ್ರಾಂಶುಪಾಲರು, ಆರ್. ಎಂ.ಓ ವಸತಿ ನಿಲಯಗಳು, ಅತಿಥಿ ಗೃಹ ಕಟ್ಟಡ, ವೈದ್ಯರ ವಸತಿ ನಿಲಯಗಳು, ಶುಶ್ರೂಷಕರ ವಸತಿ ಗೃಹಗಳು ಪುರುಷರಿಗೆ 64 ಮತ್ತು ಮಹಿಳೆಯರಿಗೆ 64 ಒಟ್ಟು 128 ವಸತಿ ಗೃಹಗಳು, ಕ್ರೀಡಾ ಸಂಕೀರ್ಣ ಮತ್ತು ಜಿಮ್, ಲ್ಯಾಂಡ್ ಸ್ಕೇಪಿಂಗ್, ಅನಿಮಲ್ ಹೌಸ್, ಪಾರ್ಕಿಂಗ್ ಸ್ಲಾಟ್, 13 ಲಿಪ್ಟ್‌ಗಳು ಹಾಗೂ 250 ಕೆ.ವಿ ಜನರೇಟರ್ 2000 ಟ್ರಾನ್ಸ್‌ಫಾರ್ಮರ, ಹೆಚ್.ಟಿ, ಲೈನ್, ಕಂಟ್ರೋಲ್ ಪೆನೆಲ್ ಕಾಮಗಾರಿಗಳ ಬಗ್ಗೆ ಪರಿಶೀಲಿಸಲಾಯಿತು. ಈ ಬಗ್ಗೆ ಕಡತವು ಸರ್ಕಾರದ ಆರ್ಥಿಕ ಇಲಾಖೆಯ ಹಂತದಲ್ಲಿದ್ದು, ಸರ್ಕಾರದ ಉಪ ಕಾರ್ಯದರ್ಶಿಗಳು ಆಡಳಿತಾತ್ಮಕ ಅನುಮೋದನೆ ನೀಡುವುದಾಗಿ ತಿಳಿಸಿದರು.

520 ಹಾಸಿಗೆಗಳ ನೂತನ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ವೈದ್ಯಕೀಯ ಉಪಕರಣ ಹಾಗೂ ಪೀಠೋಪಕರಣಗಳಿಗಾಗಿ ರೂ. 3467.873 ಲಕ್ಷಗಳ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ವಿಭಾಗವಾರು ಅತಿ ಅವಶ್ಯವಿರುವ ಉಪಕರಣ ಹಾಗೂ ಪೀಠೋಪಕರಣಗಳ ಪಟ್ಟಿಯನ್ನು ಮಾತ್ರ ಮೊದಲ ಹಂತದಲ್ಲಿ ಸರ್ಕಾರಕ್ಕೆ ಸಲ್ಲಿಸಲು ನಿರ್ದೇಶಕರು, ರಿಮ್ಸ್ ಇವರಿಗೆ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ ಇವರು ಸೂಚಿಸಿದರು.

| | |
|---|---|
| ವಿಷಯ ಸೂಚಿಸ ಸಂಖ್ಯೆ – 3 | ಭಾರತೀಯ ಮೆಡಿಕಲ್ ಕೌನ್ಸಿಲ್ ಮಾರ್ಗಸೂಚಿಯನ್ವಯ ಹುದ್ದೆಗಳನ್ನು ಸೃಜಿಸುವ ಹಾಗೂ ನೇಮಕಾತಿ ಕುರಿತಂತೆ |

ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ ಅವಶ್ಯವಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಹೆಚ್ಚುವರಿ ಹುದ್ದೆಗಳ ಸೃಜಿಸಲು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರದಿಂದ ಅನುಮೋದನೆ ಪಡೆಯಲು ಸೂಚಿಸಲಾಯಿತು. ಹಾಗೂ ರಿಮ್ಸ್ ಸಂಸ್ಥೆಯಲ್ಲಿ ಖಾಲಿ ಇರುವ ಬೋಧಕ ಸಿಬ್ಬಂದಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು, ಕಲಂ 371 (ಜೆ) ಅಡಿಯಲ್ಲಿ ನೇಮಕಾತಿ ಮಾಡುವ ಪ್ರಕ್ರಿಯೆ ಕುರಿತು ಕೂಲಂಕೂಷವಾಗಿ ಪರಿಶಿಲಿಸಿ ಕ್ರಮ ಜರುಗಿಸುವ ಕುರಿತು ಮುಂದಿನ ಸಭೆಯಲ್ಲಿ ನಿರ್ದೇಶನ ನೀಡಲಾಗುವುದೆಂದು ಮಾನ್ಯ ಸಚಿವರು ಸಭೆಗೆ ತಿಳಿಸಿದರು.

| ಕ್ರಮ ಸಂಖ್ಯೆ | ಹುದ್ದೆ | ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ ಬೇಕಾದ ಹುದ್ದೆಗಳ ವಿವರ | ಲಭ್ಯವಿರುವ ಹುದ್ದೆಗಳ ವಿವರ | ಖಾಲಿ ಇರುವ ಹುದ್ದೆಗಳ ವಿವರ |
|---|---|---|---|---|
| 1 | ಪ್ರಾಧ್ಯಾಪಕರು | 18 | 7 | 11 |
| 2 | ಸಹ ಪ್ರಾಧ್ಯಾಪಕರು | 29 | 22 | 7 |
| 3 | ಸಹಾಯಕ ಪ್ರಾಧ್ಯಾಪಕರು | 43 | 42 | 6 |
| 4 | ಹಿರಿಯ ಸ್ಥಾನಿಕರು | 44 | 35 | 10 |
| 5 | ಬೋಧಕರು | 29 | 25 | 4 |
| 6 | ಕಿರಿಯ ಸ್ಥಾನಿಕರು | 57 | 19 | 38 |
| **ಒಟ್ಟು** | | **220** | **150** | **76** |

| | |
|---|---|
| **ವಿಷಯ ಸೂಚಿ ಸಂಖ್ಯೆ.** 4 & 5 | **ಸರ್ಕಾರದಿಂದ ಮಂಜೂರಾದ ಹುದ್ದೆಗಳ ವಿವರಗಳು, ಖಾಲಿ ಇರುವ ಹುದ್ದೆಗಳು, ಹೊಸದಾಗಿ ಸೃಜಿಸಲು ಆರ್ಥಿಕ ಇಲಾಖೆಯಿಂದ ಸಹಮತಿ ಪಡೆಯಲು ಸಲ್ಲಿಸಿರುವ ಪ್ರಸ್ತಾವನೆಗಳ ವಿವರಗಳು.** |

ಸರ್ಕಾರದ ಆರ್ಥಿಕ ಇಲಾಖೆಯ ಹಂತದಲ್ಲಿರುವ ಈ ಕೆಳಕಂಡ ರಿಮ್ಸ್ ಸಂಸ್ಥೆಯ ಕಡತಗಳನ್ನು ಕೂಡಲೇ ಇತ್ಯರ್ಥಗೊಳಿಸುವಂತೆ ಮಾನ್ಯ ಸಚಿವರು ಸರ್ಕಾರದ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರಿಗೆ ಸೂಚಿಸಿದರು.

1) **3ನೇ ಹಂತದ ಕಟ್ಟಡ ಕಾಮಗಾರಿಗಳನ್ನು ಪ್ರಾರಂಭಿಸುವ ಕುರಿತು.**

ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ ಅವಶ್ಯವಿರುವ ವಿವಿಧ 3ನೇ ಹಂತದ ಕಟ್ಟಡ ಕಾಮಗಾರಿಗಳಾದ ನಿರ್ದೇಶಕರ ವಸತಿ ನಿಲಯ, ಮುಖ್ಯ ಆಡಳಿತಾಧಿಕಾರಿಗಳು, ಅರ್ಥಿಕ ಸಲಹೆಗಾರರು, ವೈದ್ಯಕೀಯ ಅದೀಕ್ಷಕರು, ಪ್ರಾಂಶುಪಾಲರು, ಆರ್. ಎಂ.ಓ ವಸತಿ ನಿಲಯಗಳು, ಅತಿಥಿ ಗೃಹ ಕಟ್ಟಡ, ವೈದ್ಯರ ವಸತಿ ನಿಲಯಗಳು, ಶುಶ್ರೂಷಕರ ವಸತಿ ಗೃಹಗಳು ಪುರುಷರಿಗೆ 64 ಮತ್ತು ಮಹಿಳೆಯರಿಗೆ 64 ಒಟ್ಟು 128 ವಸತಿ ಗೃಹಗಳು, ಕ್ರೀಡಾ ಸಂಕೀರ್ಣ ಮತ್ತು ಜಿಮ್, ಲ್ಯಾಂಡ್ ಸ್ಕೇಪಿಂಗ್, ಅನಿಮಲ್ ಹೌಸ್, ಪಾರ್ಕಿಂಗ್ ಸ್ಲಾಟ್, 13 ಲಿಫ್ಟ್‌ಗಳು ಹಾಗೂ 250 ಕೆ.ವಿ ಜನರೇಟರ್ 2000 ಟ್ರಾನ್ಸ್‌ಫಾರ್ಮರ, ಹೆಚ್.ಟಿ, ಲೈನ್, ಕಂಟ್ರೋಲ್ ಪೆನೆಲ್ ಕಾಮಗಾರಿಗಳ ಬಗ್ಗೆ ಪರಿಶೀಲಿಸಲಾಯಿತು. ಈ ಬಗ್ಗೆ ಕಡತವು ಸರ್ಕಾರದ ಆರ್ಥಿಕ ಇಲಾಖೆಯ ಹಂತದಲ್ಲಿದ್ದು, ಸರ್ಕಾರದ ಉಪ ಕಾರ್ಯದರ್ಶಿಗಳು ಆಡಳಿತಾತ್ಮಕ ಅನುಮೋದನೆ ನೀಡುವುದಾಗಿ ತಿಳಿಸಿದರು.

**2) ನೂತನ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಉಪಕರಣ ಹಾಗೂ ಪೀಠೋಪಕರಣಗಳನ್ನು ಖರೀದಿಸುವ ಬಗ್ಗೆ.**

520 ಹಾಸಿಗೆಗಳ ನೂತನ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ರೂ. 3467.873 ಲಕ್ಷಗಳ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿ ವಿಭಾಗವಾರು ಅವಶ್ಯವಿರುವ ಉಪಕರಣ ಹಾಗೂ ಪೀಠೋಪಕರಣಗಳ ಪಟ್ಟಿಯನ್ನು ಮಾತ್ರ ಸರ್ಕಾರಕ್ಕೆ ಸಲ್ಲಿಸಲು ನಿರ್ದೇಶಕರು, ರಿಮ್ಸ್ ಇವರಿಗೆ ಸೂಚಿಸಲಾಯಿತು.

**3) ರಿಮ್ಸ್ ಸಂಸ್ಥೆಯಲ್ಲಿ ಗುತ್ತಿಗೆ / ಸಂಚಿತ ವೇತನದ ಮೇಲೆ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಸಿ ನೌಕರರನ್ನು ಖಾಯಂಗೊಳಿಸುವ ಬಗ್ಗೆ.**

ಸದರಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿದ್ದು, ರಿಮ್ಸ್ ಸಂಸ್ಥೆಯಲ್ಲಿರುವ ಗ್ರೂಪ್ ಸಿ ನೌಕರರ ಖಾಯಂ ನೇಮಕಾತಿ ಕುರಿತು ಶಿವಮೊಗ್ಗ ವೈದ್ಯಕೀಯ ಸಂಸ್ಥೆಯಲ್ಲಿನ ನೌಕರರ ಬಗ್ಗೆ ಆರ್ಥಿಕ ಇಲಾಖೆಯು ಕಡತದಲ್ಲಿ ನೀಡಿರುವ ಅಭಿಪ್ರಾಯದಂತೆ ಕ್ರಮ ಕೈಗೊಳ್ಳಾಗುವುದೆಂದು ಮಾನ್ಯ ಕಾರ್ಯದರ್ಶಿಗಳು ವಿವರವಾಗಿ ಮಾಹಿತಿಯನ್ನು ಸಭೆಗೆ ನೀಡಿದರು.

| | |
|---|---|
| 6 | **ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗೆ ಉತ್ತಮ ವೈದ್ಯಕೀಯ ಸೇವೆಯನ್ನು ನೀಡಲು ಅದರಲ್ಲೂ ಹೈಟೆಕ್ ವೈದ್ಯಕೀಯ ಸೌಲಭ್ಯಗಳು ಜನಸಾಮಾನ್ಯರಿಗೆ ಕಡಿಮೆ ವೆಚ್ಚದಲ್ಲಿ ತಲುಪಿಸುವ ವಿನೂತನ ಯೋಜನೆಗಳ ಬಗ್ಗೆ ಪರಿಶೀಲಿಸುವುದು** |

ರಿಮ್ಸ್ ಸಂಸ್ಥೆಯಲ್ಲಿ ರಾಯಚೂರು ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಉತ್ತಮ ವೈದ್ಯಕೀಯ ಸೇವೆಯನ್ನು ನೀಡಲು, ಎನ್‌ಆರ್‌ಸಿ ಘಟಕ, ಮಾನಸ ಕೇಂದ್ರ ಹಾಗೂ ಹೈಟೆಕ್ ಉಪಕರಣಗಳಾದ ಸಿಟಿ ಸ್ಕ್ಯಾನ್, ಕಲರ್ ಡಾಪುಲರ್, ಎಕ್ಸ್‌ರೇ ಉಪಕರಣಗಳು, ಡಿರಿಬ್ರಿಲೇಟರ್, ಕಾರ್ಡಿಯಾಕ್ ಮಾನಿಟರ್, ಪಲ್ಸ್ ಆಕ್ಸಿಮೀಟರ್, ಅಪರೇಟಿಂಗ್ ಮೈಕ್ರೋಸ್ಕೋಪ್, ಓಟಿ ಟೇಬಲ್, ಸ್ಲಟ್ ಲ್ಯಾಂಪ್, ಮತ್ತು ಶಸ್ತ್ರ ಚಿಕಿತ್ಸಾ ಉಪಕರಣಗಳನ್ನು ಖರೀದಿಸಿರುವ ಬಗ್ಗೆ ಪರಿಶೀಲಿಸಲಾಯಿತು.

| | |
|---|---|
| 8 | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು** |

**1) ಭಾರತೀಯ ವೈದ್ಯಕೀಯ ಮಂಡಳಿಯು ಶಾಶ್ವತ ಮಾನ್ಯತೆಯ ಸಮಯದಲ್ಲಿ ತೋರಿಸಲಾಗಿದ್ದ ನ್ಯೂನತೆಗಳ ಬಗ್ಗೆ.**

ಭಾರತೀಯ ವೈದ್ಯಕೀಯ ಮಂಡಳಿಯು ಶಾಶ್ವತ ಮಾನ್ಯತೆಯ ಸಮಯದಲ್ಲಿ ತೋರಿಸಲಾಗಿದ್ದ ಈ ಕೆಳಕಂಡ ನ್ಯೂನತೆಗಳನ್ನು ಸರಿಪಡಿಸಲು ಕೈಗೊಂಡಿರುವ ಕ್ರಮಗಳ ಬಗ್ಗೆ ಪರಿಶೀಲಿಸಿ ಅನುಮೋದನೆಯನ್ನು ನೀಡಲಾಯಿತು.

**1) Shortage of Nursing staff is 69 (178 as against required 247)- recruitment of nursing staff is under process – Partially complied.**

ರಿಮ್ಸ್ ಸಂಸ್ಥೆಯಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯು ತೋರಿಸಿರುವ ಶುಶ್ರೂಷಕರ ಕೊರತೆಯನ್ನು ಇರುವುದನ್ನು ಗಮನಿಸಲಾಯಿತು. ಹಾಗೂ ಶುಶ್ರೂಷಕರ ಹುದ್ದೆಗಳನ್ನು ಸ್ಟೈಪೆಂಡರಿ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಕಲಂ 371 (ಜೆ) ಅಡಿಯಲ್ಲಿ ನೇಮಕಾತಿ ಮಾಡುವ ಪ್ರಕ್ರಿಯೆ ಕುರಿತು ಕೂಲಂಕೂಷವಾಗಿ ಪರಿಶಿಲಿಸಿ ಈ ಬಗ್ಗೆ ಕ್ರಮ ಜರುಗಿಸುವ ಕುರಿತು ಮುಂದಿನ ಸಭೆಯಲ್ಲಿ ನಿರ್ದೇಶನ ನೀಡಲಾಗುವುದೆಂದು ಮಾನ್ಯ ಸಚಿವರು ಸಭೆಗೆ ತಿಳಿಸಿದರು.

2) **X-ray – 600 mA & IITV + Fluoroscopy, not available – X-ray 800 with IITV & Fluoroscopy available but not in working condition – not complied with**

ಭಾರತೀಯ ವೈದ್ಯಕೀಯ ಮಂಡಳಿಯು ಎಕ್ಸ್‌ರೇ ವಿಭಾಗದಲ್ಲಿ ತೋರಿಸಿದ್ದ ಎಕ್ಸ್ ಉಪಕರಣಗಳ ನ್ಯೂನತೆಯನ್ನು ಸರಿಪಡಿಸಲು ಸರ್ಕಾರವು 25.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದು, ಸದರಿ ಉಪಕರಣಗಳನ್ನು ಬಾರತೀಯ ವೈದ್ಯಕೀಯ ಮಂಡಳಿಯ Specification ಪ್ರಕಾರ ಖರೀದಿಸಲು ರೂ. 85.00 ಲಕ್ಷಗಳು ಅವಶ್ಯಕತೆಯಿರುವುದರಿಂದ ಸದರಿ ಮೊತ್ತಕ್ಕೆ ಆಡಳಿತಾತ್ಮಕ ಮಂಜೂರಾತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಅನುಮೋದನೆ ಪಡೆಯಲು ಸೂಚಿಸಲಾಯಿತು.

3) **Shortage of Mobile x-ray of 2 X 30 mA & 1 X 60 mA persist – not complied with**

4) **Shortage of 02 USG persists not complied with**

5) **Deficiency of CT Machine persist not complied with**

ಸಿಟಿ ಸ್ಕ್ಯಾನ್ ಖರೀದಿಸಲು ಎಲ್‌ಸಿ ತೆರೆದಿರುವ ಬಗ್ಗೆ ಪರಿಶೀಲಿಸಲಾಯಿತು ಹಾಗೂ ಈ ಬಗ್ಗೆ ಸರಬರಾಜುದಾರರಿಗೆ ಕಾರ್ಯಾಲಯದ ಮುಖಾಂತರ ಪತ್ರ ಬರೆದು ಕೂಡಲೇ ಸಿಟಿ ಸ್ಕ್ಯಾನ್ ಉಪಕರಣವನ್ನು ಪೂರೈಸುವ ಬಗ್ಗೆ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

**2) ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ರಿಮ್ಸ್ ಸಂಸ್ಥೆಯ ಅಧೀನಕ್ಕೆ ವಹಿಸುವ ಬಗ್ಗೆ.**

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿಯನ್ನು ಪುನರ್ ಪ್ರಾರಂಭಿಸಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆಯಂದು ವಿಶೇಷಾಧಿಕಾರಿಗಳು, ರಾಜೀವ್ ಗಾಂದಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇವರು ಸಭೆಯ ಗಮನಕ್ಕೆ ತಂದರು. ಹಾಗೂ ಈ ಹಿಂದೆ ಓಪೆಕ್ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶುಶ್ರೂಷಕರನ್ನು ರಿಮ್ಸ್ ಸಂಸ್ಥೆಯಲ್ಲಿ ಸ್ಟೈಪೆಂಡರಿ ಆಧಾರದ ಮೇಲೆ ರೂ. 8,000/-ಗಳ ವೇತನದ ಮೇಲೆ ನೇಮಕಾತಿ ಹಾಗೂ ಇನ್ನಿತರ ವಿಷಯಗಳ ಬಗ್ಗೆ ದಿನಾಂಕ 24.06.2013ರಂದು ನಡೆಯಲಿರುವ ಮುಂದಿನ ಸಭೆಯಲ್ಲಿ ಚರ್ಚಿಸಲಾಗುವುದೆಂದು ಮಾನ್ಯ ಸಚಿವರು ಸಭೆಯ ಗಮನಕ್ಕೆ ತಂದರು.

**3) ರಿಮ್ಸ್ ಸಂಸ್ಥೆಯಲ್ಲಿರುವ ಬೋಧಕ ಸಿಬ್ಬಂದಿಯ ಪದೋನ್ನತಿ ನೀಡುವ ಕುರಿತು.**

ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಬೋಧಕ ಸಿಬ್ಬಂದಿಗಳಿಗೆ ಇಲಾಖಾ ಪದೋನ್ನತಿ ಸಮಿತಿ ಮೂಲಕ ಪದೋನ್ನತಿ ನೀಡಲು ನಿಯಾಮನುಸಾರ ಕ್ರಮ ಕೈಗೊಳ್ಳುವಂತೆ ಮಾನ್ಯ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸಭೆಯಲ್ಲಿ ಸೂಚಿಸಲಾಯಿತು.

ವಂದನೆಗಳೊಂದಿಗೆ ಆಡಳಿತ ಮಂಡಳಿ ಸಭೆಯು ಮುಕ್ತಾಯವಾಯಿತು.

(ಡಾ.ಬಸವರಾಜ್ ಪೀರಾಪುರ್)
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಕೆ.ಹೆಚ್. ಗೋವಿಂದರಾಜ್)
ಸರ್ಕಾರದ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ,
ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು.